ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ನಿಲಯ ಮಂಜೂರಾತಿ

832 (1378) ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ, ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ನಿಲಯಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಮುದ್ದೇಬಿಹಾಳ ತಾಲ್ಲೂಕಿಗೆ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ನಿಲಯವನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಪ್ರೊ. ಡಾ॥ ಮಮ್ತಾಜ್ ಅಲಿಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) – ಹೌದು –

ಆ) 2010–11ನೇ ಸಾಲಿಗೆ ಪರಿಶೀಲಿಸಲಾಗುವುದು.

ಬೊಂಬೆಗಳ ಉದ್ಯಮ ನಶಿಸಿ ಹೋಗುತ್ತಿರುವುದು

833 (1149) ಶ್ರೀ ಅಶ್ವತ್ಥ್ ಎಂ.ಸಿ. (ಚನ್ನಪಟ್ಟಣ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕು ಮರದ ಆಟದ ಬೊಂಬೆಗಳಿಗೆ ಹೆಸರುವಾಸಿಯಾಗಿದ್ದು, ಈ ಉದ್ಯಮವು ನಶಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಉದ್ಯಮವನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ಉದ್ಯಮದಲ್ಲಿ ದುಡಿಯುವ ಕಾರ್ಮಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ದುಡಿಯುವ ಬಡ ಕಾರ್ಮಿಕರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಚನ್ನಪಟ್ಟಣ ತಾಲ್ಲೂಕು ಮರದ ಆಟದ ಬೊಂಬೆಗಳಿಗೆ ಹೆಸರು ವಾಸಿಯಾಗಿದೆ. ಈ ಉದ್ಯಮವು ನಶಿಸಿ ಹೋಗದಂತೆ ಕಾಯ್ದುಕೊಳ್ಳಲು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಈ ಉದ್ಯವನ್ನು ಪುನಶ್ಚೇತನಗೊಳಿಸಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:–

1) ಮೂಲಭೂತ ಸೌಕರ್ಯಕ್ಕಾಗಿ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ನಿರ್ಮಾಣ
2) ಮಾರುಕಟ್ಟೆ ಸೌಲಭ್ಯಕ್ಕಾಗಿ ಮಳಿಗೆ ಸೌಲಭ್ಯ ಒದಗಿಸುವುದು
3) ಕುಶಲಕರ್ಮಿಗಳಿಗೆ ವಿನ್ಯಾಸ ಕೌಶಲ್ಯ ಹೆಚ್ಚಿಸಲು ತರಬೇತಿ
4) ಕರಕುಶಲ ರಫ್ತು ಪಾರ್ಕ್ ಸ್ಥಾಪನೆ

ಇ) ಈ ಉದ್ಯಮದಲ್ಲಿ ದುಡಿಯುವ ಕಾರ್ಮಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

1) 260 ವಸತಿ ಕಾರ್ಯಾಗಾರಗಳನ್ನು ಕುಶಲಕರ್ಮಿಗಳಿಗೆ ನಿರ್ಮಿಸಿ ಕೊಡಲಾಗಿದೆ
2) ಮರ ಹದ ಮಾಡುವ ಯಂತ್ರ ಅಳವಡಿಸಲಾಗಿದೆ
3) ಮರ ಕುಯ್ಯುವ ಯಂತ್ರ, ಟರ್ನಿಂಗ್, ಡ್ರಿಲ್ಲಿಂಗ್, ಸ್ಯಾಂಡಿಂಗ್ ಯಂತ್ರ, ಲೇತ್ ಯಂತ್ರಗಳನ್ನೊಳಗೊಂಡ ಸಾಮಾನ್ಯ ಸೌಕರ್ಯ ಕೇಂದ್ರವನ್ನು ಸ್ಥಾಪಿಸಲಾಗಿದೆ
4) ತರಬೇತಿ ಕೇಂದ್ರ ಹಾಗೂ ಸಭಾಂಗಣ ಸೌಲಭ್ಯ
5) ಉತ್ಪಾದನಾ ಕೇಂದ್ರದ ಮೂಲಕ ಖರೀದಿಸಲಾಗುವುದು
6) ಪಾರದರ್ಶಕತೆಯ ಮೇರೆಗೆ ಖರೀದಿಸಲಾಗುವುದು [ಅರಗು, ಕಲೆಯ ಆಟಿಕೆ ವಸ್ತುಗಳು]

ಈ)

1) ಚನ್ನಪಟ್ಟಣದಲ್ಲಿ ಮರದ ಆಟದ ಬೊಂಬೆಗಳ ಕುಶಲಕರ್ಮಿಗಳಿಗಾಗಿ ಕಲಾ ಸಂಕೀರ್ಣವನ್ನು ನಿರ್ಮಿಸಲಾಗಿದೆ.

2) ಸದರಿ ಸಂಕೀರ್ಣದಲ್ಲಿ ಸಾಮಾನ್ಯ ಸೌಕರ್ಯ ಕೇಂದ್ರವನ್ನು ನಿರ್ಮಿಸಿದ್ದು, ಮರದ ಆಟದ ಬೊಂಬೆ ತಯಾರಿಕೆಗೆ ಪೂರಕವಾದ ಯಂತ್ರೋಪಕರಣಗಳು ಅಂದರೆ ಮರ ಕತ್ತರಿಸುವ ಯಂತ್ರ, ಟರ್ನಿಂಗ್ ಹಾಗೂ ಡ್ರಿಲ್ಲಿಂಗ್ ಯಂತ್ರ ಹಾಗೂ ಲೇತ್‌ಗಳನ್ನು ಅಳವಡಿಸಲಾಗಿದೆ. ಕತ್ತರಿಸಿದ ಮರದ ತುಂಡುಗಳ ತೇವಾಂಶ ಹೊರಹಾಕಲು ಹಾಗೂ ಕ್ರಿಮಿಕೀಟಗಳ ಬಾಧೆಯಿಂದ ತಪ್ಪಿಸಲು seasoning ಯಂತ್ರ ಅಳವಡಿಸಿ ಕೊಡಲಾಗಿದೆ. ಕಲಾ ಸಂಕೀರ್ಣದಲ್ಲಿ ಒಟ್ಟು 260 ವಸತಿ ಕಾರ್ಯಾಗಾರಗಳನ್ನು ನಿರ್ಮಿಸಿ [Living cum work sheds] ಕುಶಲಕರ್ಮಿಗಳಿಗೆ ಹಂಚಲಾಗಿದೆ

3) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ [ಅಭಿವೃದ್ಧಿ ಆಯುಕ್ತರು, ಹ್ಯಾಂಡಿಕ್ರಾಫ್ಟ್], ಸಂಯುಕ್ತಾಶ್ರಯದೊಂದಿಗೆ ಚನ್ನಪಟ್ಟಣದ ತಗಚಗೆರೆಯಲ್ಲಿ ಕೆ.ಎಸ್.ಎಸ್.ಐ.ಡಿ.ಸಿ. ಮುಖಾಂತರ ಅಂತರರಾಷ್ಟ್ರೀಯ ಮಟ್ಟದ Export Promotion Park ನ್ನು ರೂ. 3.00 ಕೋಟಿ ಅಂದಾಜು ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ.

4) ಕಾವೇರಿ ಆರ್ಟ್ಸ್ ಮತ್ತು ಕ್ರಾಫ್ಟ್ಸ ಎಂಪೋರಿಯಂ ಮೂಲಕ ಚನ್ನಪಟ್ಟಣದ ಕರಕುಶಲಕರ್ಮಿಗಳು ತಯಾರಿಸಿದ ಮರದ ಆಟದ ಬೊಂಬೆಗಳಿಗೆ

   a) ನೇರ ಖರೀದಿ

   b) ಮುಕ್ತ ಪಾರದರ್ಶಕ ಪ್ರಕ್ರಿಯೆ ಅಡಿಯಲ್ಲಿ ಖರೀದಿ

   c) ನೇರ ಪ್ರಾತ್ಯಕ್ಷತೆ ಮತ್ತು ಮಾರಾಟ [Live Demonstration cum sale] ಸೌಲಭ್ಯವನ್ನು ನಾಲ್ಕು ಕಾವೇರಿ ಎಂಪೋರಿಯಂಗಳಲ್ಲಿ ಕಲ್ಪಿಸಲಾಗಿದೆ.